ನಕ್ಷತ್ರಪಟ



## ರಾಜಶೇಖರ ಕುಕ್ಕುಂದಾ

ಕಲೆ: ಸಂತೋಷ್ ಸಸಿಹಿತ್ಲು




# ಏನು ಮಾಡಿತು?

ಟೀವಿ ಬಂತು ಟೀವಿ ಬಂತು
ಏನು ಮಾಡಿತು?
ಅಜ್ಜಿ ಕತೆಯ ಹೇಳುವುದನು
ನಿಲಿಸಿಬಿಟ್ಟಿತು

ಫ್ರಿಜ್ಜು ಬಂತು ಫ್ರಿಜ್ಜು ಬಂತು
ಏನು ಮಾಡಿತು?
ಅಡುಗೆಮನೆಯ ಕೆಲಸವನ್ನು
ಕಡಿಮೆ ಮಾಡಿತು?

ಕಾರು ಬಂತು ಕಾರು ಬಂತು
ಏನು ಮಾಡಿತು?
ಕಾಲು ಹೆಜ್ಜೆ ಹಾಕುವುದನು
ಕಡಿಮೆ ಮಾಡಿತು

ಮೊಬೈಲ್ ಬಂತು ಮೊಬೈಲ್ ಬಂತು
ಏನು ಮಾಡಿತು?
ಮನೆಯ ಒಳಗೆ ಮಾತುಗಳನು
ಕಡಿಮೆ ಮಾಡಿತು!



ಎಐ ಬಂತು ಎಐ ಬಂತು
ಏನು ಮಾಡಿತು?
ಮಿಸ್ ಕೊಡೋ ಹೋಂವರ್ಕೆಲ್ಲ
ತಾನೇ ಮಾಡಿತು!

